**SC No. 68/2024**
**PW-31**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 68/2024**

| | | |
|---|---|---|
| ಸಾಕ್ಷಿದಾರರ ಹೆಸರು | ಕೃಷ್ಣಕಾಂತ್ ಕೋಳಿ | ಪ್ರಮಾಣ ವಚನ ಮಾಡಿದ ದಿನಾಂಕ: 12.01.2026 |
| ತಂದೆಯ/ಗಂಡನ ಹೆಸರು | ಹೊನ್ನಟ್ಟ | |
| ವಯಸ್ಸು | 35 ವರ್ಷ | |
| ವೃತ್ತಿ | ಆರಕ್ಷಕ ಉಪನಿರೀಕ್ಷಕರು, ನಂಜನಗೂಡು ಸಂಚಾರಿ ಪೊಲೀಸ್ ಠಾಣೆ | ಪ್ರಾ.ಸಾಃ 31 |
| ವಾಸ ಸ್ಥಳ | ನಂಜನಗೂಡು | ಚಾ.ಸಾಃ 40 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕವಲಂದೆ ಪೊಲೀಸ್ ಠಾಣೆಯಲ್ಲಿ ದಿನಾಂಕ *19.01.2023* ರಿಂದ ದಿನಾಂಕ *27.01.2025* ರವರೆಗೆ ಆರಕ್ಷಕ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *30.11.2023* ರಂದು ಬೆಳಗ್ಗೆ *8 .00* ಗಂಟೆಗೆ ಚಾಸಾ-*1* ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ ***148/23*** ಕಲಂ ***302, 354, 114, 504, 506*** ಸಹಕಲಂ ***34*** ಐಪಿಸಿ ರೀತ್ಯ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವ ಹಾಗೂ ದೂರನ್ನು ಚಾಸಾ-*31* ರವರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿದ್ದೆನು. ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ದೂರನ್ನು

ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*1* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.*1 (ಸಿ)*** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.*56*** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.*56 (ಎ)*** ಎಂದು ಗುರುತಿಸಲಾಯಿತು.

ಅದೇ ದಿನ ಪ್ರಕರಣ ಘೋರ ಪ್ರಕರಣ ಆಗಿದ್ದರಿಂದ ಮುಂದಿನ ತನಿಖೆಗಾಗಿ ಪ್ರಕರಣವನ್ನು ಚಾಸಾ–***41*** ರವರಿಗೆ ಹಸ್ತಾಂತರಿಸಿದ್ದೆನು.

ಅದೇ ದಿನ ಚಾಸಾ–41 ರವರು ಪ್ರಕರಣದ ಆರೋಪಿಗಳಾದ ಆದೇಶ ಮತ್ತು ಪ್ರಭುಸ್ವಾಮಿ ರವರನ್ನು ಪತ್ತೆ ಮಾಡಿ ಹಾಜರು ಪಡಿಸುವಂತೆ ಜ್ಞಾಪನ ನೀಡಿದ್ದರು. ಸಾಕ್ಷಿದಾರರು ಜ್ಞಾಪನವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–57** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ–57(ಎ)** ಎಂದು ಗುರುತಿಸಲಾಯಿತು.

ದಿನಾಂಕ 01.12.2023 ರಂದು ಚಾಸಾ–32 ಮತ್ತು 33 ರವರನ್ನು ಆರೋಪಿ ಪತ್ತೆ ಸಂಬಂಧವಾಗಿ ಕರೆದುಕೊಂಡು ನಂಜನಗೂಡು ಮತ್ತು ಮೈಸೂರಿನಲ್ಲಿ ಗಸ್ತು ಮಾಡುತ್ತಿರುವಾಗ ತಾಂತ್ರಿಕ ಮತ್ತು ಬಾತ್ಮಿದಾರರಿಂದ ಬಂದ ಖಚಿತ ಬಾತ್ಮಿ ಮೇರೆಗೆ ಪ್ರಕರಣದ ಆರೋಪಿ ಆದೀಶ್ ನನ್ನು ಬೇಗೂರು ಬಸ್ ನಿಲ್ದಾಣದ ಬಳಿ ಮಧ್ಯಾಹ್ನ 2.30 ಕ್ಕೆ ವಶಕ್ಕೆ ಪಡೆದುಕೊಂಡು ಚಾಸಾ–41 ರ ಮುಂದೆ ಹಾಜರುಪಡಿಸಿದ್ದೆನು. ಸಾಕ್ಷಿದಾರರು ನಿವೇದನೆಯನ್ನು ನೋಡಿ ಗುರುತಿಸಿದ್ದು ವರದಿಯನ್ನು **ನಿಪಿ–58** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ–58(ಎ)** ಎಂದು ಗುರುತಿಸಲಾಯಿತು.

ದಿನಾಂಕ 02.12.2023 ರಂದು ಈ ಪ್ರಕರಣದ ಇನ್ನೊಬ್ಬ ಆರೋಪಿಯಾದ ಪ್ರಭುಸ್ವಾಮಿ ರವರನ್ನು ಹೆಚ್.ಸಿ 205 ಮತ್ತು ಪಿಸಿ 452 ಸುರೇಶ್ ರವರನ್ನು ಕರೆದುಕೊಂಡು ಸಂತೆ ಮರಹಳ್ಳಿ ಕಡೆ ಗಸ್ತು ಮಾಡುತ್ತಿರುವಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಕುದೇರು ಗ್ರಾಮದ ಪ್ರಭುಸ್ವಾಮಿಯವರ ಮನೆಯಲ್ಲಿ 2 ನೇ ಆರೋಪಿ ಪ್ರಭುಸ್ವಾಮಿಯವರನ್ನು ಬೆಳಗ್ಗೆ 11.30 ಗಂಟೆಗೆ ವಶಕ್ಕೆ ಪಡೆದು 12.30 ಗಂಟೆಗೆ ಚಾಸಾ–41 ರವರ ಮುಂದೆ ಹಾಜರುಪಡಿಸಿದ್ದೆನು. ಈ ಬಗ್ಗೆ ವರದಿಯನ್ನು ಸಲ್ಲಿಸಿದ್ದೆನು. ಸಾಕ್ಷಿದಾರರು ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.59** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ.59(ಎ)** ಎಂದು ಗುರುತಿಸಲಾಯಿತು.

ನಾನು ಇಬ್ಬರು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

ದೂರನ್ನು ಪ್ರಾಸಾ–1 ರವರ ತಮ್ಮ ಮಹದೇವಸ್ವಾಮಿ ಎಂಬುವರ ಕೈಬರವಣಿಗೆಯಲ್ಲಿ ನೀಡಿದ್ದರು. ದೂರಿನಲ್ಲಿ ಮಹದೇವಮ್ಮ ರವರ ಪರವಾಗಿ ಮಹದೇವಸ್ವಾಮಿ ಕೈಬರವಣಿಗೆ ಇರುತ್ತದೆ ಎಂದು ಉಲ್ಲೇಖ ಇರುವುದಿಲ್ಲ ಆದರೆ ಮಹದೇವಸ್ವಾಮಿ ನನ್ನ ಕೈಬರವಣಿಗೆ ಎಂದು ಬರೆದಿರುತ್ತಾರೆ. ಪ್ರ.ವ.ವರದಿಯಲ್ಲಿ ಮಹದೇವಸ್ವಾಮಿ ಯವರ ಕೈಬರವಣಿಗೆ ಯ ದೂರು ಎಂದು ಉಲ್ಲೇಖಿಸಿರುವುದಿಲ್ಲ. ನಾನು ದೂರನ್ನು ಸಲ್ಲಿಸುವಲ್ಲಿ ಆದಂತಹ ವಿಳಂಭದ ಬಗ್ಗೆ ಪ್ರಾಥಮಿಕವಾಗಿ ವಿಚಾರಣೆ

ಮಾಡಿರುವುದಿಲ್ಲ. ಮರಳ್ಳಿಪುರ ಗ್ರಾಮದಿಂದ ಮೈಸೂರಿಗೆ ಬರಬೇಕಾದರೆ ಕವಲಂದೆ ನಂಜನಗೂಡು ದಾಟಿಕೊಂಡು ಮೈಸೂರಿಗೆ ಬರಬೇಕು ಎಂದರೆ ಸರಿ. ದಿನಾಂಕ 29.11.2023 ಸಂಜೆ 5.30 ಗಂಟೆಯಿಂದ ರಿಂದ 30.11.2023 ಈ ದೂರು ದಾಖಲಾಗುವ ವರೆಗೆ ಈ ಘಟನೆ ಬಗ್ಗೆ ಮಾಹಿತಿ ಗೊತ್ತಾಗಿತ್ತು ಏಕೆಂದರೆ ಆಸ್ಪತ್ರೆಯಿಂದ ಡೆತ್ ಇಂಟಿಮೇಶನ್ ಬಂದಿತ್ತು. ಡೆತ್ ಇಂಟಿಮೇಶನ್ 30.11.2023 ರಂದು ಬೆಳಗಿನ ಜಾವ ಬಂದಿತ್ತು. ನನಗೆ ಡೆತ್ ಇಂಟಿಮೇಶನ್ ಬಂದ ಮೇಲೆ ಕೂಡಲೇ ಮಿಶನ್ ಆಸ್ಪತ್ರೆಗೆ ಹೋಗಿ ವಿಚಾರಣೆ ಮಾಡಿದ್ದು ಅವರು ಠಾಣೆಗೆ ಬಂದು ದೂರು ಕೊಡುತ್ತೇವೆ ಎಂದು ಹೇಳಿದ್ದರು. ಆಸ್ಪತ್ರೆಯಲ್ಲಿ ಮೃತ ನ ಹೆಂಡತಿ ಮತ್ತು ಅಳಿಯ ಮಹದೇವಸ್ವಾಮಿರವರನ್ನು ವಿಚಾರಣೆ ಮಾಡಿದಾಗ ಠಾಣೆಗೆ ಬಂದು ದೂರು ಕೊಡುವುದಾಗಿ ಹೇಳಿದ್ದರು. ಈ ರೀತಿ ಹೇಳಿದ್ದನ್ನು ನಾನು ಠಾಣೆಯ ದಿನಚರಿ ಯಲ್ಲಿ ಉಲ್ಲೇಖ ಮಾಡಿರುವುದಿಲ್ಲ. ಫ್ರಾಸಾ-1 ರವರ ಗಂಡ ಸ್ಥಳೀಯವಾಗಿ ರಾಜಕೀಯವಾಗಿ ಪ್ರಭಾವಿ ವ್ಯಕ್ತಿ ಇದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೃತನ ಸಂಬಂಧಿಕರು ಸಹ ರಾಜಕೀಯವಾಗಿ ಪ್ರಭಾವಿ ವ್ಯಕ್ತಿ ಇದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ದೂರನ್ನು ಯಾವ ರೀತಿ ಕೊಡಬೇಕು ಎನ್ನುವ ಬಗ್ಗೆ ಯೋಜನೆ ಮಾಡಿಕೊಂಡು ಅಮಾಯಕರ ವಿರುದ್ಧ ಕೊಟ್ಟಂತಹ ಸುಳ್ಳು ದೂರನ್ನು ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಾಥಮಿಕವಾಗಿ ಯಾವುದೇ ತನಿಖೆ ಮಾಡದೇ ಸುಳ್ಳು ದೂರನ್ನು ದಾಖಲು ಮಾಡಿಕೊಂಡಿದ್ದೇನೆ ಎಂದರೆ

ಸರಿಯಲ್ಲ. 1 ನೇ ಆರೋಪಿತನನ್ನು ನಾನು ಮೊದಲು ನೋಡಿರಲಿಲ್ಲ. ಠಾಣೆಯಲ್ಲಿ 1 ನೇ ಆರೋಪಿತನ ಬಾವಚಿತ್ರ ಇರಲಿಲ್ಲ. ಬೇಗೂರು ಬಸ್ ನಿಲ್ದಾಣ ಜನ ಸಂದಣಿ ಇರುವ ಜಾಗ ಎಂದರೆ ಸರಿ. ನಿಲ್ದಾಣದ ಅಕ್ಕಪಕ್ಕ ಹೂ ಹಣ್ಣು ಮಾರುವವರು ಇರುತ್ತಾರೆ ಎಂದರೆ ಸರಿ. 1 ನೇ ಆರೋಪಿತನನ್ನು ವಶಕ್ಕೆ ಪಡೆದುಕೊಂಡಾಗ ಅಲ್ಲಿ ಯಾವುದೇ ಮಹಜರ್ ಕ್ರಮ ಕೈಗೊಂಡಿರುವುದಿಲ್ಲ. ಬೇಗೂರು ಬಸ್ ನಿಲ್ದಾಣ ದ ಹತ್ತಿರ 1 ನೇ ಆರೋಪಿತನನ್ನು ನಾನು ವಶಕ್ಕೆ ಪಡೆದುಕೊಂಡಿದ್ದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವೇಳೆಗಾಗಲೇ 1 ನೇ ಆರೋಪಿತನು ನಮ್ಮ ವಶದಲ್ಲಿ ಇದ್ದ ಎಂದರೆ ಸರಿಯಲ್ಲ. ಇಬ್ಬರು ಆರೋಪಿತರದ್ದು ಸ್ವಂತ ಮರಳ್ಳಿಪುರ ಗ್ರಾಮ ಎಂದರೆ ಸರಿ. ಮರಳ್ಳಿಪುರದಿಂದ ಕುದೇರು ಗ್ರಾಮಕ್ಕೆ ಸುಮಾರು 7-8 ಕಿ.ಮೀಟರ್ ಅಂತರ ಇರಬಹುದು. 2 ನೇ ಆರೋಪಿತನನ್ನು ಕರೆದುಕೊಂಡು ಬರುವಾಗ ಮಾಹಿತಿ ತಿಳಿಸಿ ಕರೆದುಕೊಂಡು ಬಂದಿದ್ದೆವು. ಮಹಜರ್ ಕ್ರಮ ಜರುಗಿಸಿರುವುದಿಲ್ಲ. ನಾನೂ ಮೊದಲು 2 ನೇ ಆರೋಪಿತನ್ನು ನೋಡಿರಲಿಲ್ಲ ಅವರ ಫೋಟೋ ಸಹ ಠಾಣೆಯಲ್ಲಿ ಇರಲಿಲ್ಲ, ಬಾತ್ಮಿದಾರರ ಕಡೆಯಿಂದ ಬಂದಂತಹ ಮಾಹಿತಿ ಮೇರೆಗೆ 2 ನೇ ಆರೋಪಿತನನ್ನು ವಶಕ್ಕೆ ಪಡೆದುಕೊಂಡಿದ್ದೆವು. ಬೇಗೂರು ಬಸ್ ನಿಲ್ದಾಣದಿಂದ ಮರಳ್ಳಿ ಗ್ರಾಮಕ್ಕೆ ಸುಮಾರು 30-40 ಕಿ.ಮೀಟರ್ ಅಂತರ ಇದೆ ಎಂದರೆ ಇರಬಹುದು. 2 ನೇ ಆರೋಪಿತನನ್ನು ದಿನಾಂಕ 01.12.2023 ರಂದು ಮರಳ್ಳಿ ಗ್ರಾಮದಿಂದಲೇ ಕರೆದುಕೊಂಡು ಬಂದಿದ್ದೆವು ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ

ಆರೋಪಿತರನ್ನು ನಾನು ಹೇಳಿದಂತಹ ಸ್ಥಳ ದಿಂದ ಕರೆದುಕೊಂಡು ಬರದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡೆತ್ ಇಂಟಿಮೇಶನ್ ಬಂದ ಮೇಲೆ ನಾನು ಮಿಶನ್ ಆಸ್ಪತ್ರೆಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇಲಾಖೆಯ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**